ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಆರ್. ಪ್ರಸನ್ನಕುಮಾರ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2420
ಉತ್ತರಿಸಬೇಕಾದ ದಿನಾಂಕ	:	30.03.2021
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸೌಹಾರ್ಧ ಸಹಕಾರಿ ಸಂಘಗಳನ್ನು ಕಾಯ್ದೆಯ ಯಾವ ಅಧಿನಿಯಮದಡಿ ನೊಂದಾವಣೆ ಮಾಡಲಾಗಿದೆ;	ಕರ್ನಾಟಕ ಸೌಹರ್ದ ಸಹಕಾರಿ ಅಧಿನಿಯಮ 1997ರ ಅವಕಾಶಗಳಂತೆ ನೋಂದಣಿ ಮಾಡಲಾಗಿರುತ್ತದೆ.
ಆ)	ಇಲ್ಲಿಯವರೆಗೆ ರಾಜ್ಯದಲ್ಲಿ ನೊಂದಾವಣಿಯಾದ ಸೌಹಾರ್ದ ಸಹಕಾರ ಸಂಘಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ದಿನಾಂಕ:23.03.2021ರ ಅಂತ್ಯಕ್ಕಿದ್ದಂತೆ ಒಟ್ಟು 5199 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)
ಇ)	ನೊಂದಾಯಿತ ಸೌಹಾರ್ದ ಸಹಕಾರ ಸಂಘಗಳು ನಷ್ಟದಲ್ಲಿವೆಯೇ; ಇದ್ದಲ್ಲಿ ಅವುಗಳ ಪುನರ್‌ಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ದಿನಾಂಕ:31.03.2020ಕ್ಕಿದ್ದಂತೆ 842 ಸೌಹಾರ್ದ ಸಹಕಾರಿಗಳು ನಷ್ಟದಲ್ಲಿರುತ್ತವೆ. ಸಹಕಾರಿಗಳನ್ನು ನಷ್ಟದಿಂದ ಲಾಭದತ್ತ ಸಾಗಲು ಅನುವಾಗುವಂತೆ ಸಂಯುಕ್ತ ಸೌಹಾರ್ದ ಸಹಕಾರಿಯಿಂದ ಕ್ರಿಯಾ ಯೋಜನೆ ರೂಪಿಸಲು ಸಹಕಾರ ನೀಡಲಾಗುತ್ತಿದೆ ಮತ್ತು ವ್ಯವಹಾರ ಅಭಿವೃದ್ಧಿ ಯೋಜನೆಗಳ ಬಗ್ಗೆ "Cluster" ತರಬೇತಿಗಳನ್ನು ನೀಡುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಲಾಗುತ್ತಿದೆ ಹಾಗೂ ಸಹಕಾರಿಗಳ ಆರ್ಥಿಕ ಪುನ:ಶ್ಚೇತನಗೊಳ್ಳಲು ನಿರಂತರ ಅಗತ್ಯ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ. ಸಂಯುಕ್ತ ಸೌಹಾರ್ದ ಸಹಕಾರಿಗಳು ಸ್ವಾಯತ್ತ ಸಂಸ್ಥೆಗಳಾಗಿರುವುದರಿಂದ ಸರ್ಕಾರದಿಂದ ಪುನ:ಶ್ಚೇತನಕ್ಕೆ ಆರ್ಥಿಕ ನೆರವು ಪಡೆಯಲು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅವಕಾಶ ಇರುವುದಿಲ್ಲ.
ಈ)	ಸೌಹಾರ್ದ ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ರಾಜ್ಯದಲ್ಲಿ 13 ಸೌಹಾರ್ದ ಸಹಕಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. (ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ).

ಸಿಒ 18 ಸಿಎಲ್ಎಮ್ 2021 (ಇ)

(signature)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ - 1

ಕ್ರಸಂ	ಜಿಲ್ಲೆಗಳು	ನೋಂದಣಿಯಾದ ಸೌಹಾರ್ದ ಸಹಕಾರಿಗಳ ಸಂಖ್ಯೆ
	ಬೆಂಗಳೂರು ಪ್ರಾಂತ್ಯ	
01	ಬೆಂಗಳೂರು	477
02	ಬೆಂಗಳೂರು ಗ್ರಾಮಾಂತರ	33
03	ಚಿಕ್ಕಬಳ್ಳಾಪುರ	39
04	ಚಿತ್ರದುರ್ಗ	90
05	ದಾವಣಗೆರೆ	70
06	ಕೋಲಾರ	37
07	ರಾಮನಗರ	22
08	ಶಿವಮೊಗ್ಗ	150
09	ತುಮಕೂರು	234
	ಕಲಬುರಗಿ ಪ್ರಾಂತ್ಯ	
10	ಬಳ್ಳಾರಿ	72
11	ಬೀದರ್	148
12	ಗುಲ್ಬರ್ಗ	209
13	ಕೊಪ್ಪಳ	311
14	ರಾಯಚೂರು	260
15	ಯಾದಗಿರಿ	57
16	ವಿಜಯನಗರ	164
	ಮೈಸೂರು ಪ್ರಾಂತ್ಯ	
17	ಚಾಮರಾಜನಗರ	23
18	ಚಿಕ್ಕಮಂಗಳೂರು	46
19	ಹಾಸನ	53
20	ಕೊಡಗು	10
21	ಮಂಡ್ಯ	17
22	ಮೈಸೂರು	68
23	ದಕ್ಷಿಣ ಕನ್ನಡ	106
24	ಉಡುಪಿ	121
	ಬೆಳಗಾವಿ ಪ್ರಾಂತ್ಯ	
25	ಬಾಗಲಕೋಟೆ	352
26	ಬೆಳಗಾವಿ	1094
27	ಧಾರವಾಡ	115
28	ಗದಗ	60
29	ಹಾವೇರಿ	140
30	ಉತ್ತರ ಕನ್ನಡ	165
31	ವಿಜಯಪುರ	456
	ಒಟ್ಟು	5199

ಅನುಬಂಧ-2

ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಪಟ್ಟಿ

ಕ್ರ. ಸಂ	ನೋಂದಣಿ ಸಂಖ್ಯೆ	ಸಹಕಾರಿಯ ಹೆಸರು	ಪ್ರಕರಣದ ವಿವರ	ಸಹಕಾರಿಯ ಪ್ರಸ್ತುತ ವಿವರ	ದುರುಪಯೋಗದ ಅಂದಾಜು ಮೊತ್ತ
1	ಆರ್‌ಎಸ್‌ಆರ್-63.ನೋಂದಣಿ:1002003-04. ದಿನಾಂಕ: 24.07.2003	ಎನಿವಿಂಕ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಸಹಕಾರಿಯ ನಿರ್ದೇಶಕರುಗಳನ್ನು ಅನರ್ಹಗೊಳಿಸಿ ಆಡಳಿತಾಧಿಕಾರಿ ನೇಮಕ ಮಾಡಲಾಗಿತ್ತು, ಆಡಳಿತಾಧಿಕಾರಿಯ ಪದಾವಧಿಯು ಮುಕ್ತಾಯಗೊಂಡ ನಂತರದಲ್ಲಿ ಸಮಾಪನಾಧಿಕಾರ ನೇಮಕ ಮಾಡಲಾಗಿದೆ. ಸಮಾಪನಾಧಿಕಾರಿಗಳು: ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು.	ಕರ್ನಾಟಕ ಠೇವಣಿದಾರರ ಹಿತರಕ್ಷಣಾ ಅಧಿನಿಯಮದನ್ವಯ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಸಕ್ಷಮ ಪ್ರಾಧಿಕಾರವು ನೇಮಕವಾಗಿದ್ದು, ಸಕ್ಷಮ ಪ್ರಾಧಿಕಾರಕ್ಕೆ ಸಹಕಾರಿಯ ಪ್ರಕರಣವು ಸೇರಿದಂತೆ ಎಲ್ಲಾ ಪ್ರಕರಣಗಳು ಸಕ್ಷಮ ಪ್ರಾಧಿಕಾರಕ್ಕೆ ವರ್ಗಾವಣೆಯಾಗಿರುತ್ತದೆ.	9.81.00.000/- (ಲೆಕ್ಕ ಪರಿಶೋದನಾ ವರದಿಯ ಪ್ರಕಾರ)
2.	ಎಚ್‌ಆರ್‌ಬಿ-45-ನೋಂದಣಿ/ಸೌ.ಕಾ-21-1954-2019 ದಿನಾಂಕ: 20.06.2009	ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋಆಪರೇಟೀವ್ ಲಿ., ಬೆಂಗಳೂರು.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು, ಸಹಕಾರಿಯ ನಿರ್ದೇಶಕರ ಆಸ್ತಿಗಳನ್ನು ಜಪ್ತಿ ಪೂರ್ವ ಆದೇಶವನ್ನು ಪಡೆಯಲಾಗಿರುತ್ತದೆ. ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸಹಕಾರಿಯ ಸಮಾಪನೆಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸಮಾಪನಾಧಿಕಾರಿಗಳು: ಸಹಕಾರಿಗಳ ಸಹಾಯಕ ನಿಬಂಧಕರು 1ನೇ ವಲಯ, ಬೆಂಗಳೂರು ನಗರ ಜಿಲ್ಲೆ.	ಸಹಕಾರಿಗೆ ಶ್ರೀ ಎಂ. ಈ ಮುದೇನೂರು. ಸಹಕಾರಿಗಳ ಸಹಾಯಕ ನಿಬಂಧಕರು. ಒಂದನೇ ವಲಯ. ಬೆಂಗಳೂರು, ಇವರು ಸದರಿ ಸಹಕಾರಿಯ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದು, ತದನಂತರ ಮಾನ್ಯ ಸಹಕಾರಿಗಳ ನಿಬಂಧಕರು, ಸಹಕಾರಿಗಳ ಸಹಾಯಕ ನಿಬಂಧಕರು, ಒಂದನೇ ವಲಯ, ಬೆಂಗಳೂರು, ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಮಾರ್ಪಡು ಆದೇಶ ಹೊರಡಿಸಲಾಗುತ್ತು, ಪ್ರಸ್ತುತ ದಿನಾಂಕ: 08.03.2021ರ ಆದೇಶದಂತೆ ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಎರಡನೇ ವಲಯ ಬೆಂಗಳೂರು ಇವರನ್ನು ಮಾರ್ಪಡು ಆದೇಶದ ಮೂಲಕ ನೇಮಕ ಮಾಡಿ ಆದೇಶಿಸಿರುತ್ತಾರೆ. ಸಮಾಪನಾ ಕಾರ್ಯ ಚಾಲ್ತಿಯಲ್ಲಿರುತ್ತದೆ.	18,00,00,000/- (ಠೇವಣಿದಾರರ/ ದೂರುದಾರರ ಮಾಹಿತಿಯಂತೆ)
3.	ಜೆಆರ್‌ಬಿ/ಆರ್‌ಜಿಎನ್/ ಎಸ್‌ಎ/42/136/200	ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು, ಸಹಕಾರಿಯ ನಿರ್ದೇಶಕರ ಆಸ್ತಿಗಳನ್ನು ಜಪ್ತಿ ಪೂರ್ವ ಆದೇಶವನ್ನು ಪಡೆಯಲಾಗಿರುತ್ತದೆ.	ಪ್ರಸ್ತುತ ಸಮಾಪನಾಧಿಕಾರಿಗಳು ಸಹಕಾರಿಯ ಎಲ್ಲಾ ವರ್ಷಗಳ ಲೆಕ್ಕಪರಿಶೋಧನೆ ಪೂರ್ಣಗೊಳಿಸಲಾಗಿದೆ, ಕಂದಾಯ ಇಲಾಖೆಯಿಂದ	21,95,80,795/- (ಲೆಕ್ಕ ಪರಿಶೋದನಾ ವರದಿಯ ಪ್ರಕಾರ)

ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಪಟ್ಟಿ

	7-08 ದಿನಾಂಕ: 13.02.2008		ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸಹಕಾರಿಯ ಸಮಾಪನೆಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸಮಾಪನಾಧಿಕಾರಿಗಳು: ಶ್ರೀ ರಘುನಂದನ್ ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು	ದಿನಾಂಕ:29.01.2018ರಂದು ಹೊರಡಿಸಲಾದ ಅಧಿಸೂಚನೆಯಂತೆ ಅಸಿಸ್ಟೆಂಟ್ ಕಮೀಷನರ್, ಬೆಂಗಳೂರು ನಾರ್ಥ್ ಸಬ್ ಡಿವಿಜನ್ ಇವರು 'ಕಾಂಪಿಟೆಂಟ್ ಅಥಾರಿಟಿ'ಯಾಗಿ ನೇಮಕಗೊಂಡಿರುತ್ತಾರೆ	
4.	ಜಿಆರ್‌ಪಿ/ಆರ್‌ಜಿಎನ್/ ಸೌ.ಕಾ/14/1700/ 2011-12 ದಿನಾಂಕ: 26.07.2011	ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು. ಸಹಕಾರಿಯ ನಿರ್ದೇಶಕರ ಆಸ್ತಿಗಳನ್ನು ಜಪ್ತಿ ಪೂರ್ವ ಆದೇಶವನ್ನು ಪಡೆಯಲಾಗಿರುತ್ತದೆ. ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸಹಕಾರಿಯ ಸಮಾಪನೆಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸಮಾಪನಾಧಿಕಾರಿಗಳು: ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು	ಇಲಾಖೆಯಿಂದ ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಕೆಯಾಗಿದೆ. ಸಹಕಾರಿಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಸಮಾಪನಾಧಿಕಾರಿ ಅಧಿಕಾರ ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಪ್ರಕರಣ ನ್ಯಾಯಲಯದಲ್ಲಿರುತ್ತದೆ ಹಾಗೂ ಆಡಿಟ್ ಮಾಡಿಸುವುದು ಬಾಕಿ ಇರುತ್ತದೆ.	10,00,00,000/- (ಲೆಕ್ಕ ಪರಿಶೋಧನಾ ವರದಿಯ ಪ್ರಕಾರ)
5.	ಎಆರ್10/ಆರ್‌ಎಸ್‌ಆರ್/ ನೋಂದಣಿ/2038/ಸೌಹಾರ್ದ/2009-10 ದಿನಾಂಕ: 07.11.2009	ಶ್ರೀ ಶಿವಸಾಗರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ, ಬೆಳಗಾವಿ.	ಸಹಕಾರಿಯಲ್ಲಿ ಅವ್ಯವಹಾರ ನಡೆದಿರುವ ಕುರಿತಂತೆ ದೂರು ದಾಖಲಾಗಿರುವ ಹಿನ್ನೆಲೆಯಲ್ಲಿ ಸಹಕಾರಿಯ ಪರಿವೀಕ್ಷಣೆ ನಡೆಸಿ, ಪರಿವೀಕ್ಷಣಾ ವರದಿಯಲ್ಲಿ ಸಹಕಾರಿಗೆ ನಷ್ಟ ಉಂಟುಮಾಡಿರುವ ಕುರಿತು ವರದಿಯಾಗಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಸಹಕಾರಿಯ ನಷ್ಟಕ್ಕೆ ಕಾರಣವಾದ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲು ತೀರ್ಮಾನಿಸಲಾಗಿತ್ತು. ಅದರಂತೆ ನಷ್ಟಕ್ಕೆ ಕಾರಣರಾದ ನಿರ್ದೇಶಕರಿಗೆ ನೋಟಿಸ್ ನೀಡಿ, ಸಹಕಾರಿಗೆ ಆಗಿರುವ ನಷ್ಟವನ್ನು ತುಂಬಲು ಕಾಲಾವಕಾಶ ನೀಡಲಾಗಿತ್ತು. ಆದರೂ ನಷ್ಟವನ್ನು ತುಂಬದೆ, ಇರುವುದರಿಂದ ಅಂತಹ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲಾಗಿದೆ.	ಪ್ರಸ್ತುತ ಪ್ರಕರಣವು ಸೌಹಾರ್ದ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ವಿಚಾರಣಾ ಹಂತದಲ್ಲಿದೆ.	17,72,96,760/- (ಪರಿವೀಕ್ಷಣಾ ವರದಿಯ ಪ್ರಕಾರ)
6.	ಎಆರ್-09/ಆರ್‌ಎಸ್‌ಆರ್/ಸೌಹಾರ್ದ/1086/2005-06	ದಿ ಬೆಳಗಾವಿ ಲಿಬರಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ.	ವಿಚಾರಣಾ ವರದಿಯಲ್ಲಿ ಸಹಕಾರಿಗೆ ನಷ್ಟ ಉಂಟುಮಾಡಿರುವ ಕುರಿತು ವರದಿಯಾಗಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಸಹಕಾರಿಯ ನಷ್ಟಕ್ಕೆ ಕಾರಣವಾದ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲು ತೀರ್ಮಾನಿಸಲಾಗಿತ್ತು. ಅದರಂತೆ ನಷ್ಟಕ್ಕೆ ಕಾರಣರಾದ ನಿರ್ದೇಶಕರಿಗೆ ನೋಟಿಸ್ ನೀಡಿ, ಸಹಕಾರಿಗೆ ಆಗಿರುವ ನಷ್ಟವನ್ನು ತುಂಬಲು ಕಾಲಾವಕಾಶ ನೀಡಲಾಗಿತ್ತು. ಆದರೂ ನಷ್ಟವನ್ನು	ಪ್ರಸ್ತುತ ಪ್ರಕರಣವು ಸೌಹಾರ್ದ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ವಿಚಾರಣಾ ಹಂತದಲ್ಲಿದೆ.	1,33,35,000/- (ಪರಿವೀಕ್ಷಣಾ ವರದಿಯ ಪ್ರಕಾರ)

ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಪಟ್ಟಿ

			ತುಂಬದೆ ಇರುವುದರಿಂದ ಆಂಶಿಕ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲಾಗಿದೆ. ಸಮಾಪನಾಧಿಕಾರಿಗಳು: ಶ್ರೀ ದರ್ಶನ್. ಹಿರಿಯ ವ್ಯವಸ್ಥಾಪಕರು. ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು		
7.	ಸಂ.ಉನಿಕೊ/ವಿ-1/ಸೌಕಾ/2481/2011-12 ದಿನಾಂಕ: 22.08.2011	ಶ್ರೀ. ಸಾಯಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು. ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸಹಕಾರಿಯ ಸಮಾಪನೆಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸಮಾಪನಾಧಿಕಾರಿಗಳು. ಶ್ರೀ ಪವನ್ ಎಂ.ಆರ್ ಜಿಲ್ಲಾ ಸಂಯೋಜಕರು, ಕೊಪ್ಪಳ	ಪ್ರಸ್ತುತ ಸಹಕಾರಿಗೆ ಸಮಾಪನಾಧಿಕಾರಿ ನೇಮಕವಾಗಿದ್ದು, ಸಮಾಪನಾಧಿಕಾರಿ ಅಧಿಕಾರ ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸಮಾಪನಾ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.	37,97,685/- (ಠೇವಣಿದಾರರ/ ದೂರುದಾರರ ಮಾಹಿತಿಯಂತೆ)
8.	ಜೆಆರ್‌ಬಿ/ಆರ್‌ಜಿಎನ್/ ಸೌ.ಕಾ/17/3428/ 2013-14 ದಿನಾಂಕ: 31.01.2014	ಶ್ರೇಯಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರ ನೇಮಕ ಮಾಡಲಾಗಿತ್ತು. ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಮಾನ್ಯ ಸಹಕಾರಿಗಳ ನಿಬಂಧಕರಿಂದ ಸಮಾಪನಾಧಿಕಾರಿ ನೇಮಕ ಪ್ರಕ್ರಿಯೆ ಬಾಕಿಯಿರುತ್ತದೆ.	ಮಾನ್ಯ ಸಹಕಾರಿಗಳ ನಿಬಂಧಕರಿಂದ ಸಮಾಪನಾಧಿಕಾರಿ ನೇಮಕ ಪ್ರಕ್ರಿಯೆ ಬಾಕಿಯಿರುತ್ತದೆ.	1,00,00,000/- (ಠೇವಣಿದಾರರ/ ದೂರುದಾರರ ಮಾಹಿತಿಯಂತೆ)
9.	ಡಿಆರ್‌ಎಲ್:ಆರ್‌ಎಸ್ ಆರ್:ಸೌಕಾ: ನೋಂದಣಿ/1066:2004-05. ದಿನಾಂಕ: 05.05.2004	ಶ್ರೀ ಆಶ್ರಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ.	ವಿಚಾರಣಾ ವರದಿಯಲ್ಲಿ ಸಹಕಾರಿಗೆ ನಷ್ಟ ಉಂಟುಮಾಡಿರುವ ಕುರಿತು ವರದಿಯಾಗಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಸಹಕಾರಿಯ ನಷ್ಟಕ್ಕೆ ಕಾರಣವಾದ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲು ತೀರ್ಮಾನಿಸಲಾಗಿತ್ತು; ಅದರಂತೆ ನಷ್ಟಕ್ಕೆ ಕಾರಣರಾದ ನಿರ್ದೇಶಕರಿಗೆ ನೋಟಿಸ್ ನೀಡಿ; ಸಹಕಾರಿಗೆ ಆಗಿರುವ ನಷ್ಟವನ್ನು ತುಂಬಲು ಕಾಲಾವಕಾಶ ನೀಡಲಾಗಿತ್ತು, ಆದರೂ ನಷ್ಟವನ್ನು ತುಂಬದೆ ಇರುವುದರಿಂದ ಆಂಶಿಕ ನಿರ್ದೇಶಕರ ವಿರುದ್ಧ ಅಧಿಭಾರ ಅರ್ಜಿ ದಾಖಲಿಸಲಾಗಿರುತ್ತದೆ. ಸಮಾಪನಾಧಿಕಾರಿಗಳು: ಶ್ರೀ ಶ್ರೀಕಾಂತ ಬರುವೆ, ಉಪಪ್ರಧಾನ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ.	ಪ್ರಸ್ತುತ ಪ್ರಕರಣವು ಸೌಹಾರ್ದ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ವಿಚಾರಣಾ ಹಂತದಲ್ಲಿದೆ.	63,32,69,883/- (ಪರಿವೀಕ್ಷಣಾ ವರದಿಯ ಪ್ರಕಾರ)
10	ಸಂಆರ್‌ಎಲ್:ಆರ್‌ಎಸ್ ಆರ್:ಸೌಕಾ:1204/ 2005-06 ದಿನಾಂಕ: 07.07.2005	ಶ್ರೀ ಭೀಮಾಂಬಿಕ ಮಹಿಳಾ ವಿವಿಧೋದ್ದೇಶ. ಸೌಹಾರ್ದ ಸಹಕಾರಿ ನಿ., ಬೆಳಗಾವಿ.	ಸಹಕಾರಿಯ ಕಾರ್ಯಚಟುವಟಿಕೆ ಪರಿಶೀಲಿಸಲು ಸಹಕಾರಿಯ ಪರಿವೀಕ್ಷಣೆ ನಡೆಸಲಾಗಿದ್ದು, ಪರಿವೀಕ್ಷಣಾ ವರದಿಯಲ್ಲಿನ ನ್ಯೂನ್ಯತೆಗಳನ್ನಾಧರಿಸಿ ವಿಚಾರಣೆಗೆ ಶಿಫಾರಸ್ಸು ಮಾಡಿದನ್ವಯ ವಿಚಾರಣಾ ಕೈಗೊಂಡು ವಿಚಾರಣಾಧಿಕಾರಿಗಳು ತಮ್ಮ ವರದಿಯನ್ನು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಬೆಳಗಾವಿ ಪ್ರಾಂತ ಇವರಿಗೆ ಸಲ್ಲಿಸಿರುತ್ತಾರೆ.	ದಿನಾಂಕ: 15.10.2020ರ ವಿಚಾರಣಾ ವರದಿಯು ಸಲ್ಲಿಕೆಯಾಗಿರುತ್ತದೆ.	41,78,50,000/- (ಸಹಕಾರಿಯ ತಾತ್ಕಾಲಿಕ ಆಥಾವೆ ಪತ್ರದ ಪ್ರಕಾರ)

11	ಆರ್ ಎಸ್ ಆರ್ / ಸೌ.ಕಾ: 201:ನೋಂದಣಿ:106:2014-15 ದಿನಾಂಕ:21.04.2015	ಶ್ರೀ ಕನ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ. ಬೆಂಗಳೂರು	ಸಹಕಾರಿಯ ವಿರುದ್ಧ ಠೇವಣಿದಾರರ ದೂರಿನ ಹಿನ್ನಲೆಯಲ್ಲಿ ಸಹಕಾರಿ ಪರಿವೀಕ್ಷಣೆ ನಡೆಸಿ, ಪರಿವೀಕ್ಷಣಾ ವರದಿಯಲ್ಲಿ ಸಹಕಾರಿಯಲ್ಲಿ ಅಧಿಕಾರ ದುರುಪಯೋಗ ಮತ್ತು ಅವ್ಯವಹಾರ ಕಂಡುಬಂದ ಹಿನ್ನಲೆಯಲ್ಲಿ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು. ಸಹಕಾರಿಯ ನಿರ್ದೇಶಕರ ಆಸ್ತಿಗಳನ್ನು ಜಪ್ತಿ ಪೂರ್ವ ಆದೇಶವನ್ನು ಪಡೆಯಲಾಗಿರುತ್ತದೆ. ನಂತರದಲ್ಲಿ ವಿಶೇಷಾಧಿಕಾರಿಗಳ ಅವಧಿ ಮುಕ್ತಾಯವಾಗಿರುವುದರಿಂದ ಸಹಕಾರಿಯ ಸಮಾಪನೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಹಾಗೂ ಸಕ್ಷಮ ಪ್ರಾಧಿಕಾರ ನೇಮಕವಾಗಿರುತ್ತಾರೆ. ಮತ್ತು ವಿಚಾರಣಾಧಿಕಾರಿ ಸಹ ನೇಮಕವಾಗಿರುತ್ತಾರೆ.	ವಿಚಾರಣಾಧಿಕಾರಿ ನೇಮಕವಾಗಿದ್ದು, ವಿಚಾರಣಾ ಹಂತದಲ್ಲಿದೆ. ಹಾಗೂ ಸಕ್ಷಮ ಪ್ರಾಧಿಕಾರ ನೇಮಕವಾಗಿರುತ್ತಾರೆ. ಪ್ರಸ್ತುತ ಸಹಕಾರಿಯ ಪ್ರಕರಣವು ಸಿಐಡಿ ಅಡಿಯಲ್ಲಿ ವಿಚಾರಣೆ ಜಾರಿಯಲ್ಲಿರುತ್ತದೆ. ಹಾಗೂ ಸಹಕಾರಿಯ ಕುರಿತು ಉಚ್ಛ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (W.P.8746/2020) ದಾಖಲಾಗಿರುತ್ತದೆ. (ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಗತಿಯಲ್ಲಿದೆ) ಹಾಗೂ ಮಾನ್ಯ ಗೌ॥ ಉಚ್ಛ ನ್ಯಾಯಾಲಯದ ಆದೇಶದಂತೆ ಸಹಕಾರಿಗೆ ಮಾನ್ಯ ಗೌ॥ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನೊಳಗೊಂಡ ಆಡಳಿತ ಮಂಡಳಿ ಸಮಿತಿಯು ರಚನೆಯಾಗಿರುತ್ತದೆ.	ಅಂದಾಜು 494/- ಕೋಟಿ ರೂ. (ಪರಿವೀಕ್ಷಣಾ ವರದಿಯ ಪ್ರಕಾರ)
12	ಜೆಆರ್‌ಬಿ/ಆರ್.ಜಿ.ಎನ್ /ಸೌಹಾ/03/3673/2015-16. ದಿನಾಂಕ: 19.06.2015.	ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು	ಸಹಕಾರಿಯ ಪರಿವೀಕ್ಷಣಾ ವರದಿಯಲ್ಲಿ ಅಧಿಕಾರ ದುರುಪಯೋಗ ಮತ್ತು ಅವ್ಯವಹಾರ ಕಂಡುಬಂದ ಹಿನ್ನಲೆಯಲ್ಲಿ ಸಹಕಾರಿಯ ನಿರ್ದೇಶಕರುಗಳನ್ನು ಅನರ್ಹಗೊಳಿಸಿ ವಿಶೇಷಾಧಿಕಾರಿ ನೇಮಕ ಮಾಡಲಾಗಿತ್ತು ಹಾಗೂ ಸಕ್ಷಮ ಪ್ರಾಧಿಕಾರ ನೇಮಕವಾಗಿರುತ್ತಾರೆ. ವಿಚಾರಣಾಧಿಕಾರಿಗಳು ಸಂಬಂಧಿಸಿದ ನಿಬಂಧಕರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.	ವಿಚಾರಣಾಧಿಕಾರಿ ನೇಮಕವಾಗಿದ್ದು, ವಿಚಾರಣಾ ವರದಿಯು ಸಲ್ಲಿಕೆಯಾಗಿರುತ್ತದೆ. ಹಾಗೂ ಸಕ್ಷಮ ಪ್ರಾಧಿಕಾರ ನೇಮಕವಾಗಿರುತ್ತಾರೆ. ಹಾಗೂ ಸದರಿ ರಿಟ್ ಪಿಟಿಷನ್ ಸಂಖ್ಯೆ 8674/2020 (ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ) ಮತ್ತು ಸಂಯುಕ್ತ ಸಹಕಾರಿಯಿಂದ ಸಹಕಾರಿಯ ಮೇಲೆ ಶಂಕರಪುರ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. (ಕ್ರಿಮಿನಲ್ ಪ್ರಕರಣ ಸಂಖ್ಯೆ 11/2020) ಹಾಗೂ ಮಾನ್ಯ ಗೌ॥ ಉಚ್ಛ ನ್ಯಾಯಾಲಯದ ಆದೇಶದಂತೆ ಸಹಕಾರಿಗೆ	ಅಂದಾಜು 253.43.82.046.08 /- (ವಿಚಾರಣಾ ವರದಿಯ ಪ್ರಕಾರ)

ಅನುಬಂಧ - 2

ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಪಟ್ಟಿ

				ಶ್ರೀ ಕೆ ಎಸ್. ಶ್ಯಾಮ್ ಪ್ರಸಾದ, ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಇವರನು ಸದರಿ ಸಹಕಾರಿಯ ಆಡಳಿತಾಧಿಕಾರಿಯಾಗಿ ದಿನಾಂಕ: 17.03.2021ರಂದು ನೇಮಕವಾಗಿರುತ್ತಾರೆ.	
13	ಡಿಆರ್‌ಎಲ್/ಡಿಆರ್‌ಎಸ್/128/ಕೆಎಎಸ್/ಯುಡಿಜಿ/2006-07/ ದಿನಾಂಕ: 12.12.2006	ಶ್ರೀ ಗಜರಾಜ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ.	ಸಹಕಾರಿಯಲ್ಲಿ ಠೇವಣಿದಾರರ ಹಣವನ್ನು ಮರುಪಾವತಿಸುತ್ತಿಲ್ಲವೆಂದು ದೂರುಗಳ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಮಾನ್ಯ ಸಹಕಾರಿಗಳ ಸಂಯುಕ್ತ ನಿಬಂಧಕರು, ಬೆಳಗಾವಿ, ಇವರು ಸದರಿ ಸಹಕಾರಿಯ ವಿಚಾರಣೆ ನಡೆಸಲು ಆದೇಶಿಸಿರುತ್ತಾರೆ. ಸದರಿ ಸಹಕಾರಿಯ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ವಿಚಾರಣೆಗೆ ಸಂಬಂಧಪಟ್ಟ ದಾಖಲಾತಿಯನ್ನು ಸಹಕಾರಿಯ ಮುಚ್ಚಿರುವ ಬಾಗಿಲನ್ನು ತೆರೆದು ವಿಚಾರಣೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆಯಲಾಗಿದೆ. ಪ್ರಸ್ತುತ ಸಹಕಾರಿಯ ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗೆ ಸಹಕಾರಿಯ ಲೋಪದೋಷಗಳಿಗೆ ಸಂಬಂಧಪಟ್ಟಂತೆ ನೋಟೀಸ್‌ನ್ನು ನೀಡಿ ಕ್ರಮವಿಡಲಾಗಿದೆ. ವಿಚಾರಣಾಧಿಕಾರಿ: ಶ್ರೀ ಸಂತೋಷ ಬಸಣ್ಣನವರ, ಕಿರಿಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಪ್ರಾಂತೀಯ ಕಛೇರಿ ಬೆಳಗಾವಿ.	ವಿಚಾರಣಾಧಿಕಾರಿ ನೇಮಕವಾಗಿದ್ದು ವಿಚಾರಣಾ ಹಂತದಲ್ಲಿದೆ.	ಅಂದಾಜು 13,88,67,820/- (31.03.2017ರ ಸಹಕಾರಿಯ ತಾತ್ಕಾಲಿಕ ಆಡಾವೆ ತಃಖ್ತೆ ಪ್ರಕಾರ)